**ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :**

ಅ) 2007–08ನೇ ಸಾಲಿನಲ್ಲಿ ಮಂಜೂರಾಗಿದೆ.

ಆ) ಹೌದು.

ಇ) ಈಗ ನಿವೇಶನ ಲಭ್ಯವಾಗಿದ್ದು, ಮುಂದಿನ ಸಾಲುಗಳಲ್ಲಿ ಈ ಕಾಲೇಜಿಗೆ ಅನುದಾನ ಒದಗಿಸಲಾಗುವುದು. ಪ್ರಸ್ತುತ ಸದರಿ ಕಾಲೇಜಿಗೆ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹಣಕಾಸಿನ ಲಭ್ಯತೆಯನ್ನಾಧರಿಸಿ ಕ್ರಮ ವಹಿಸಲಾಗುವುದು.

ಊ) ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿ ಗೋವಿನ ತಳಿಗಳ ಸಮೀಕ್ಷೆ**

**313 (591) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) :** ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೋವಿನ ತಳಿಗಳ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ;

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ವಿವಿಧ ಗೋ ತಳಿಗಳ ಬಗ್ಗೆ ಮಾಹಿತಿ ನೀಡುವುದು;

ಇ) ಅಧಿಕ ಹಾಲು ಹಾಗೂ ರೋಗ ನಿರೋಧಕ ತಳಿಗಳು ರೈತರಿಗೆ ಅನುಕೂಲವಾಗುವ ಬಗ್ಗೆ ಗುರುತಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಗುರುತಿಸಲಾಗಿರುವ ತಳಿಗಳಾವುವು;

ಉ) ಈ ತಳಿಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

**ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :**

ಅ) ಹೌದು.

ಆ) 18ನೇ ಜಾನುವಾರು ಗಣತಿಯ ತಾತ್ಕಾಲಿಕ ವರದಿಯ ಪ್ರಕಾರ ವಿವಿಧ ಗೋ ತಳಿಗಳ ವಿವರ ಕೆಳಕಂಡಂತಿದೆ;

| | | |
|---|---|---|
| ಮಿಶ್ರತಳಿ | ಜೆರ್ಸಿ | 889605 |
| | ಹೆಚ್ ಎಫ್ | 1184400 |
| | ಇತರೆ | 116686 |
| | ಒಟ್ಟು | **2190691** |
| ವಿದೇಶಿ | ಜೆರ್ಸಿ | 819 |
| | ಹೆಚ್ ಎಫ್ | 338 |
| | ಇತರೆ | 25 |
| | ಒಟ್ಟು | **1182** |
| ಸ್ಥಳೀಯ | ಹಳ್ಳಿಕಾರ್ | 1998438 |
| | ಅಮೃತ್ ಮಹಲ್ | 95956 |
| | ಖಿಲಾರ್ | 452058 |
| | ಡಿಯೋನಿ | 68815 |
| | ಮಲೆನಾಡು ಗಿಡ್ಡ | 1281493 |
| | ಕೃಷ್ಣವ್ಯಾಲಿ | 3764 |
| | ಇತರೆ | 4403888 |
| | ಒಟ್ಟು | **8304412** |
| | ಒಟ್ಟು ದನಗಳು | **10496285** |

ಇ) ಹೌದು.

ಈ) **ಅಧಿಕ ಹಾಲು ಉತ್ಪಾದನೆಯ ತಳಿಗಳು :** ಹೆಚ್.ಎಫ್, ಜರ್ಸಿ.

**ರೋಗ ನಿರೋಧಕ ತಳಿಗಳು :** ಹಳ್ಳಿಕಾರ್, ಅಮೃತ್ ಮಹಲ್, ಕೃಷ್ಣವ್ಯಾಳಿ, ಖಿಲಾರ್, ಡಿಯೋನಿ.

**ಎಮ್ಮೆ ತಳಿಗಳು :** ಸೂರ್ತಿ.

ಉ) ಮಿಶ್ರತಳಿ ರಾಸುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**1) ಕೃತಕ ಗರ್ಭಧಾರಣೆ ಕಾರ್ಯಕ್ರಮ :** ರಾಜ್ಯದಲ್ಲಿರುವ 4110 ಇಲಾಖಾ ಪಶುವೈದ್ಯಕೀಯ ಸಂಸ್ಥೆಗಳು ಭೈಫ್ ಸಂಸ್ಥೆಗೆ ಸೇರಿದ 72 ಹಾಗೂ ಕೆ.ಎಂ. ಎಫ್.ಗೆ ಸೇರಿದ 2281 ಕೇಂದ್ರಗಳ ಮೂಲಕ ಹೆಚ್.ಎಫ್. ಮತ್ತು

ಜರ್ಸಿ ತಳಿಗಳ ಘನೀಕೃತ ವೀರ್ಯದಿಂದ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

**2) ಲಸಿಕಾ ಕಾರ್ಯಕ್ರಮ** : ಮಿಶ್ರತಳಿ ರಾಸುಗಳ ಆರೋಗ್ಯ ಸಂರಕ್ಷಣೆ ಸಲುವಾಗಿ ಸಾಮಾನ್ಯವಾಗಿ ಕಂಡುಬರುವ ಕಾಲುಬಾಯಿ ಜ್ವರ, ಚಪ್ಪೆ ರೋಗ, ನೆರಡಿ ರೋಗ, ಗಳಲೆ ರೋಗ ಮುಂತಾದವುಗಳ ವಿರುದ್ಧ ಉಚಿತ ಲಸಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ದೇಶಿ ತಳಿಯ ಗೋವುಗಳಾದ ಹಳ್ಳಿಕಾರ್, ಅಮೃತ್ ಮಹಲ್, ದೇವಣಿ, ಕೃಷ್ಣವ್ಯಾಳಿ, ಖಿಲ್ಲಾರ್ ಮುಂತಾದ ತಳಿ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

**1) ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕ್ರಮ** : ನೋಂದಾಯಿತ ಸರ್ಕಾರೇತರ ಸಂಸ್ಥೆಗಳಿಗೆ ರೂ.10.00 ಲಕ್ಷಗಳವರೆಗೆ ಒಮ್ಮೆ ಮಾತ್ರ ಸರ್ಕಾರದಿಂದ ಅನುದಾನ ನೀಡಲಾಗುವುದು.

**2) ಸ್ವದೇಶಿಯ ತಳಿಗಳ ಸಂರಕ್ಷಣೆಗಾಗಿ ಜಾನುವಾರು ಕ್ಷೇತ್ರಗಳು** : ಹಳ್ಳಿಕಾರ್ ತಳಿಗೆ ತುಮಕೂರು ಜಿಲ್ಲೆಯಲ್ಲಿ ಅಮೃತ್ ಮಹಲ್ ಚಿಕ್ಕಮಗಳೂರು ಜಿಲ್ಲೆಯಲ್ಲಿ, ಖಿಲಾರ್ ತಳಿಗೆ ಹಾವೇರಿ ಜಿಲ್ಲೆಯಲ್ಲಿ, ದೇವಣಿ ತಳಿಗೆ ಬೀದರ್ ಜಿಲ್ಲೆಯಲ್ಲಿ ಕ್ಷೇತ್ರಗಳಿದ್ದು ಸದರಿ ತಳಿಗಳ ಸಂರಕ್ಷಣೆ ಹಾಗೂ ಸಂವರ್ಧನೆ ನಡೆಸಲಾಗುತ್ತಿದೆ.

**ರಾಯಚೂರು ಡೈರಿ ನಿರ್ಮಾಣದ ಕಾಮಗಾರಿ ಬಗ್ಗೆ**

**314 (592) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)** : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಡೈರಿ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಹಾಲು ಮಹಾ ಮಂಡಳಿಯು ಯಾರಿಗೆ ವಹಿಸಲಾಗಿದೆ;

ಆ) ಕಾಮಗಾರಿಯನ್ನು ಗುತ್ತಿಗೆ ಷರತ್ತುಗಳ ಅನ್ವಯ ನಿಗದಿತ ಸಮಯದಲ್ಲಿ ಮುಗಿಸಲಾಗಿದೆಯೆ; ಹಾಗಿಲ್ಲದಿದ್ದಲ್ಲಿ, ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಈ ಕಾಮಗಾರಿ ಬಗ್ಗೆ ನ್ಯಾಯಾಲಯದ ಮುಂದೆ ಗುತ್ತಿಗೆದಾರರು ಮೊಕದ್ದಮೆ ಹೂಡಿರುವುದು ನಿಜವೇ; ಹಾಗಿದ್ದಲ್ಲಿ,